
# ದೇಶದೊಂದಿಗೆ ಮನಸ್ಸನ್ನೂ ವಿಭಜಿಸಿದ ಬರ್ಲಿನ್ ಗೋಡೆ


'ಬರ್ಲಿನ್ ವಾಲ್' ಕಟ್ಟುತ್ತಿರುವ ಕಾರ್ಮಿಕರು
ಚಿತ್ರಕೃಪೆ: ವಿಕಿಕಾಮನ್ಸ್

**ಮೂರು ದಶಕಗಳ ಕಾಲ ದ್ವೇಷ, ತಿರಸ್ಕಾರ, ಅಸೂಯೆ, ನಿರಾಕರಣೆಯ ಪ್ರತೀಕವಾಗಿ ನಿಂತುಬಿಟ್ಟಿದ್ದ ಬರ್ಲಿನ್ ಗೋಡೆ, ಈಗ ಬಣ್ಣದ ಚಿತ್ತಾರಗಳಿಂದ ಆವೃತವಾಗಿದೆ. ಆ ಬಣ್ಣಗಳ ಹಿಂದೆ ದುರಾಡಳಿತದ ಛಾಯೆ ಅಡಗಿ ಕುಳಿತಿದೆ.**

**■ ಕೋಟೂರ್ ಸಂಪತ್**

ಸೆಪ್ಟೆಂಬರ್ 1945. ಎರಡನೇ ವಿಶ್ವ ಮಹಾಯುದ್ಧ ಕೊನೆಗೊಂಡಿದ್ದ ಅವಧಿ. ಆಗ ಜರ್ಮನಿ ದೇಶದಲ್ಲಿನ 'ಬರ್ನೌರ್ ರಸ್ತೆ'ಯನ್ನು ಕೇಂದ್ರವಾಗಿರಿಸಿಕೊಂಡು ಜರ್ಮನಿಯನ್ನು ಪೂರ್ವ ಜರ್ಮನಿ ಮತ್ತು ಪಶ್ಚಿಮ ಜರ್ಮನಿ ಎಂದು ವಿಭಜನೆ ಮಾಡಲಾಯಿತು.

ಪೂರ್ವ ಜರ್ಮನಿ ಸೋವಿಯತ್ ಒಕ್ಕೂಟ ನಿಯಂತ್ರಣಕ್ಕೆ ಬಂದು ಕಮ್ಯುನಿಸ್ಟ್ ಆಳ್ವಿಕೆ ಶುರುವಾಯಿತು. ಪಶ್ಚಿಮ ಜರ್ಮನಿ ಫ್ರೆಂಚ್ ಆಳ್ವಿಕೆಯಲ್ಲಿ ಪಾಶ್ಚಿಮಾತ್ಯ ಬಂಡವಾಳಶಾಹಿ ಆಡಳಿತ ತಲೆ ಎದ್ದಿತು. ಇವೆರಡೂ ಪ್ರತ್ಯೇಕ ಆಳ್ವಿಕೆಗಳಾದರೂ ಎರಡೂ ಕಡೆಯಿಂದ ನಾಗರಿಕರು ಈ ಬರ್ನೌರ್ ರಸ್ತೆಯ ಮೂಲಕ ಹಾದುಹೋಗಲು ಅವಕಾಶವಿತ್ತು. ಈ ಓಡಾಟ ಆಗಸ್ಟ್ 1961ರಲ್ಲಿ ಹಠಾತ್ ಕೊನೆಗೊಂಡಿತು. ಇದಕ್ಕೆ ಕಾರಣ, ಪೂರ್ವ ಬರ್ಲಿನ್‌ನಲ್ಲಿದ್ದ ಕಟ್ಟುನಿಟ್ಟಿನ ಕಮ್ಯುನಿಸ್ಟ್ ಆಡಳಿತ.

ಪೂರ್ವ ಬರ್ಲಿನ್ ನಾಗರಿಕರಿಗೆ ಪಶ್ಚಿಮ ಜರ್ಮನಿಯಲ್ಲಿ ಲಭ್ಯವಿರುವ ಸ್ವಾತಂತ್ರ್ಯ ಮತ್ತು ಆರ್ಥಿಕ ಉದ್ಯೋಗಾವಕಾಶಗಳು ಆಕರ್ಷಕವೆನಿಸಿದವು. ಜನ ಪೂರ್ವ ಜರ್ಮನಿಯಿಂದ ಪಶ್ಚಿಮ ಜರ್ಮನಿಗೆ ಸುಲಭವಾಗಿ ವಲಸೆ ಹೋಗಲು ತೊಡಗಿದರು. ಇದರಿಂದ ಪೂರ್ವ ಜರ್ಮನಿಗೆ ಮಾನವ ಸಂಪನ್ಮೂಲ ನಷ್ಟದಿಂದ ಹಿಡಿದು ಅನೇಕ ಕೊರತೆಗಳ ಅನುಭವವಾಯಿತು. ಈ ಮಾನವ ವಲಸೆ ತಡೆಯಲು 1961 ಆಗಸ್ಟ್‌ನಲ್ಲಿ 'ಜರ್ಮನ್ ಡೆಮಾಕ್ರೆಟಿಕ್ ರಿಪಬ್ಲಿಕ್' (GDR) ಪೂರ್ವ ಮತ್ತು ಪಶ್ಚಿಮ ಬರ್ಲಿನ್ ಅನ್ನು ಬೇರ್ಪಡಿಸುವ ಭಾರೀ ತಡೆಗೋಡೆಯನ್ನು ನಿರ್ಮಿಸಿತು.

ಈ ಬರ್ಲಿನ್ ಗೋಡೆಯು ಸುಮಾರು 155 ಕಿಲೋ ಮೀಟರ್‌ಗಳವರೆಗೆ ವಿಸ್ತರಣೆಗೊಂಡು, ಜರ್ಮನಿಯನ್ನು ಎರಡು ಪ್ರತ್ಯೇಕ ಪ್ರದೇಶಗಳಾಗಿ ವಿಂಗಡಿಸಿಬಿಟ್ಟಿತು. ಗೋಡೆ ಹಾದುಹೋಗಲು ಪ್ರಯತ್ನಿಸಿದವರನ್ನು ಗುಂಡಿಟ್ಟು ಕೊಲ್ಲಲಾಯಿತು. ಸುಮಾರು ಮೂರು ದಶಕಗಳ ಕಾಲ ಈ ಬರ್ಲಿನ್ ಗೋಡೆ ದ್ವೇಷ, ತಿರಸ್ಕಾರ, ಅಸೂಯೆ, ನಿರಾಕರಣೆಯ ಪ್ರತೀಕವಾಗಿ ನಿಂತುಬಿಟ್ಟಿತು. ಇದರ ಕಾರಣದಿಂದಾಗಿ ಸುಮಾರು ಮುನ್ನೂರಕ್ಕೂ ಹೆಚ್ಚು ನಾಗರಿಕರು ಜೀವ ಕಳೆದುಕೊಂಡರು. ಕುಟುಂಬಗಳನ್ನು ಮತ್ತು ಸ್ನೇಹಿತರನ್ನು ಬೇರ್ಪಡಿಸಿ ಅಪಾರ ಸಾವು ನೋವಿಗೆ ಕಾರಣವಾದ ಈ ತಡೆಗೋಡೆ ಜರ್ಮನಿಯಲ್ಲದೆ ಇಡೀ ಪ್ರಪಂಚದ ಮೇಲೆ ಆಳವಾದ ಪ್ರಭಾವವನ್ನು ಬೀರಿತು.

ಬರ್ಲಿನ್ ಗೋಡೆ ಶೀತಲ ಸಮರದ ಸೈದ್ಧಾಂತಿಕ ಸಂಘರ್ಷವನ್ನು ಪ್ರತಿನಿಧಿಸುತ್ತ ಬಂಡವಾಳಶಾಹಿ ಪಶ್ಚಿಮ ಮತ್ತು ಕಮ್ಯುನಿಸ್ಟ್ ಪೂರ್ವದ ನಡುವಿನ ವಿಭಜನೆಯನ್ನು ಗಾಢವಾಗಿ ಸಂಕೇತಿಸಿತು. ಮುಂದೆ ಅನೇಕ ವರ್ಷಗಳ ಪ್ರತಿಭಟನೆಗಳ ನಂತರ ಮತ್ತು ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಬರ್ಲಿನ್ ಗೋಡೆಯನ್ನು ಅಂತಿಮವಾಗಿ ನವೆಂಬರ್ 1989ರಲ್ಲಿ ಕೆಡವಿ ನೆಲಸಮ ಮಾಡಲಾಯಿತು. ಎರಡೂ ಕಡೆಯ ನಾಗರಿಕರು ಬರ್ಲಿನ್ ಗೋಡೆಯ ಕೆಡವುವಿಕೆಯನ್ನು ಸಂಭ್ರಮಾಚರಣೆಯೊಂದಿಗೆ ಸ್ವಾಗತಿಸಿದರು. ಈ ಘಟನೆಯು ಪೂರ್ವ ಮತ್ತು ಪಶ್ಚಿಮ ಜರ್ಮನಿಯ ಪುನರೇಕೀಕರಣಕ್ಕೆ ನಾಂದಿ ಹಾಡಿ ಇತಿಹಾಸದಲ್ಲಿ ವಿಶೇಷ ತಿರುವು ತಂದಿತು.

ಈಗ ಅಳಿದುಳಿದ ಬರ್ಲಿನ್ ಗೋಡೆಯ ಭಾಗಗಳ ಮೇಲೆ ಬಣ್ಣಬಣ್ಣದ ಚಿತ್ರಗಳು ರಾರಾಜಿಸತೊಡಗಿ ಇದೊಂದು ಐತಿಹಾಸಿಕ ಸ್ಮಾರಕವಾಗಿ ಮಾರ್ಪಟ್ಟು ಪ್ರವಾಸಿಗರ ಭೇಟಿ ತಾಣವಾಗಿದೆ.

ಪ್ರತಿಕ್ರಿಯಿಸಿ: **feedback@sudha.co.in**

ಅಳಿದುಳಿದ 'ಬರ್ಲಿನ್ ವಾಲ್ ಸ್ಮಾರಕ'ದ ಮೇಲೆ ಸಾಂಕೇತಿಕ ಬಣ್ಣಬಣ್ಣದ ಚಿತ್ರಗಳು



